ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)

**K. YALAKKI GOWDA**
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ.ಪತ್ರ ಸಂಖ್ಯೆ: ಗ್ರಾಅಪ/307/ಗ್ರಾಪಂಅ/2014 ದಿನಾಂಕ:19-05-2014

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳ ಬೀದಿದೀಪಗಳ ನಿರ್ವಹಣಾ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ:19-04-2014 ಮತ್ತು 21-04-2014
2) ಸರ್ಕಾರದ ಇದೇ ಸಂಖ್ಯೆಯ ನಿರ್ದೇಶಕರು (ಪಂ.ರಾಜ್) ರವರ ಅರೆ ಸರ್ಕಾರಿ ಪತ್ರ ದಿ:12-05-2014.

* * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳ ಕಡೆಗೆ ಗಮನ ಸೆಳೆಯಲಾಗಿದೆ.

ಉಲ್ಲೇಖ (2) ರ ಅರೆ ಸರ್ಕಾರಿ ಪತ್ರದಲ್ಲಿ ಗ್ರಾಮ ಪಂಚಾಯತಿಗಳಲ್ಲಿನ ಬೀದಿದೀಪಗಳ ನಿರ್ವಹಣೆಯ ಸಮಗ್ರ ಮಾಹಿತಿಯನ್ನು 32 ಕಾಲಂಗಳ ಪರಿಷ್ಕೃತ ನಮೂನೆಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು ಮಾಹಿತಿಯನ್ನು ದಿನಾಂಕ:20-05-2014 ರೊಳಗೆ ಸಿದ್ಧಪಡಿಸಿಕೊಳ್ಳಲು ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕ್ರಮ ವಹಿಸುವಂತೆ ಕೋರಲಾಗಿತ್ತು.

ಪ್ರಸ್ತುತ ಸದರಿ ಮಾಹಿತಿಯನ್ನು ಪಂಚತಂತ್ರಾಂಶದಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲಾಗಿದ್ದು, ಕೂಡಲೇ ಮಾಹಿತಿಯನ್ನು ಅಳವಡಿಸುವಂತೆ ತಮ್ಮನ್ನು ಕೋರಿದೆ.

ಮುಂದುವರೆದು, ಸಾಮಾನ್ಯ ಬಲ್ಬುಗಳನ್ನು ಎಲ್.ಇ.ಡಿ. ಬಲ್ಬುಗಳಾಗಿ ಪರಿವರ್ತಿಸಲು ಇದು ಸದಾವಕಾಶ – ಮೊದಲು ಪಂಚತಂತ್ರ ತಂತ್ರಾಂಶದಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಈಗಾಗಲೇ ಕೇಳಿರುವ ಮಾಹಿತಿಯನ್ನು ಅಳವಡಿಸಿದವರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಮೊದಲ ಆದ್ಯತೆ ಕಲ್ಪಿಸಲಾಗುವುದು.

**ಆದರಗಳೊಂದಿಗೆ,**

ತಮ್ಮ ವಿಶ್ವಾಸಿ,
19/5/14

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,